**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1750/2025

| | |
|---|---|
| ಸಾಕ್ಷಿದಾರರ ಹೆಸರು | : ಮಹಾಬಲೇಶ್ವರ |
| ತಂದೆಯ/ಗಂಡನ ಹೆಸರು | : ಹುಚ್ಚನಾಯ್ಕ |
| ವಯಸ್ಸು | : 61 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಃ | : ಕುಗ್ವೆ |

ಸಿ ಡಬ್ಲ್ಯೂ– 4 ಪಿ.ಡಬ್ಲ್ಯೂ– 4

**ದಿನಾಂಕ 22.06.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ.

ಪೋಲಿಸರು ಈ ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿನಾಂಕಃ 07.06.2023 ರಂದು ನಾನು ಮತ್ತು ಚಾಸಾ–3 ರವರು ಸಾಗರ – ಹೊನ್ನಾವರ ಎನ್ ಹೆಚ್ 69 ರ ರಸ್ತೆಯ ಕ್ರಾಸ್ ಹತ್ತಿರ ನಿಂತಿದ್ದಾಗ, ಚಾಸಾ–2 ರವರು ಚಾಸಾ–12 ರವರಿಗೆ ಸೇರಿದ ಕೆಎ 19 ಇಎಕ್ಸ್ 2770 ಬೈಕ್ ಚಾಲನೆ ಮಾಡಿಕೊಂಡು ಹಿಂಭಾಗದಲ್ಲಿ ಚಾಸಾ–1 ರವರ ಮಗನಾದ ಮಣಿಕಂಠ ಇತನನ್ನು ಕೂರಿಸಿಕೊಂಡು ಶಿರಸಿಯಿಂದ ಸಾಗರಕ್ಕೆ ರಸ್ತೆ ಎಡಭಾಗದಲ್ಲಿ ಬರುತ್ತಿರುವಾಗ ಸಾಗರದ ಕಡೆಯಿಂದ

ಹುಸವಂತೆ ಕಡೆಗೆ ಹೋಗುವ ಸಲುವಾಗಿ ಆರೋಪಿಯು ತಮ್ಮ ಕೆಎ –31 ಇಡಿ 7133 ಬೈಕನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಬಲಭಾಗಕ್ಕೆ ಹೋಗಿ ಎದುರುನಿಂದ ಚಾಸಾ–2 ರವರು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿ ಹೊಡೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಚಾಸ–1ರವರ ಮಗ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ. ಸದರಿ ಅಪಘಾತಕ್ಕೆ ಆರೋಪಿಯೇ ಕಾರಣ ಎಂದರೆಸರಿಯಲ್ಲ. ಸದರಿ ಅಪಘಾತವನ್ನು ಪ್ರತ್ಯೇಕ್ಷವಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

ನಸಾಕ್ಷಿಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ..........................ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆಸರಿಯಲ್ಲ. ಸದರಿ ಹೇಳಿಕೆಯನ್ನು ಉಲ್ಲೇಖಕ್ಕಾಗಿ ನಿಶಾನೆ ಪಿ 10 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.1750/2025

| | |
|---|---|
| ಸಾಕ್ಷಿದಾರರ ಹೆಸರು | : ಸಂಗಪ್ಪ |
| ತಂದೆಯ/ಗಂಡನ ಹೆಸರು | : ದುರ್ಗಪ್ಪ |
| ವಯಸ್ಸು | : 42 ವರ್ಷ |
| ಉದ್ಯೋಗ | : ಖಾಸಗಿ |
| ವಾಸಃ | : ಶಿರಸಿ |

ಸಿ ಡಬ್ಲ್ಯೂ– 5 ಪಿ.ಡಬ್ಲ್ಯೂ– 3

**ದಿನಾಂಕ 22.06.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಸ.ಸ. ಅ ರವರಿಂದಃ**

ನಿಪಿ–2 ಅನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರಗೆ ಅದನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ನಿಪಿ–2 ಅನ್ನು ಕೃತ್ಯ ನಡೆದ ಸ್ಥಳದಲ್ಲಿ ದಿಃ 07.06.2023 ರಂದು ಸಂಜೆ 4.30 ರಿಂದ 5.30 ರಂದು ಮಾಡಿರುತ್ತಾರೆ.

ನಿಪಿ–3 ಅನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರಗೆ ಅದನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು.

ನಿಪಿ–7 ಅನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರಗೆ ಅದನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು. ನಿಪಿ–7 ಅನ್ನು ಅದೇ ದಿನ 6.30 ಯಿಂದ 7.00 ವರೆಗೆ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ 4, 5, 8, 9 ರಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

(ಸಾಕ್ಷಿಯನ್ನು ಸರ್ಕಾರಿ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿಃ 08.06.2023 ರಂದು ನಿಪಿ–2 ಮತ್ತು 7 ಅನ್ನು ಮಾಡಲಾಯಿತು ಎಂದರೆ ಸರಿ. ನಿಪಿ–2 ಕಾಲ್ಲೆ ಗ್ರಾಮದ ಕಾನಲೆ ಕ್ರಾಸ್ ನಲ್ಲಿ ಟಾರು ರಸ್ತೆಯಲ್ಲಿ ಮಾಡಲಾಗಿದೆ ಎಂದರೆ ಸರಿ. ಸಂಜೆ 6.00 ರಿಂದ 7.00 ರವರೆಗೆ ನಿಪಿ–7 ಅನ್ನು ಮಾಡಲಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಎಮ್ ಆರ್ ರವರಿಂದಃ**

ಚಾಸಾ–1 ರವರು ನನ್ನನ್ನು ನಿಪಿ–2 ಮತ್ತು 7 ಅನ್ನು ತಯಾರಿಸುವಲ್ಲಿ ಕರೆದುಕೊಂಡು ಬಂದಿರುತ್ತಾರೆ. ಚಾಸ–1 ನಮ್ಮ ಗ್ರಾಮಸ್ತರು. ನಿಪಿ–2 ಮತ್ತು 7 ಅನ್ನು ಮಾಡಿದ ಜಾಗದ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಿಪಿ–2 ಮತ್ತು 7 ಅನ್ನು ಮಾಡುವಾಗ ಯಾರು ಯಾರು ಪೊಲೀಸರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಚಾಸಾ–1 ಮತ್ತು ಚಾಸಾ–6 ಪ್ರೇಮಾರವರ ಮಗಳು ರೋಜಾ ನಿಪಿ–2 ಮತ್ತು 7 ಅನ್ನು ಮಾಡುವಾಗ ಹಾಜರು ಇದ್ದರು. ಚಸಾ–1 ರವರು ನನ್ನನ್ನು ಹಾಗೂ ಚಾಸಾ–6 ರವರನ್ನು ಆ ದಿನ ಕರೆದುಕೊಂಡು ಬಂದಿರುತ್ತಾರೆ. ಅಪಘಾತ ಹೇಗೆ ಆಯಿತು ಎಂದು ನನಗೆ ಪೊಲಿಸರು ಹೇಳಿರುತ್ತಾರೆ. ಪೊಲಿಸರೇ ಅಪಘಾತ ಆದ ಜಾಗವನ್ನು ತೋರಿಸಿರುತ್ತಾರೆ ಎಂದರೆ ಸರಿ. ಪೊಲಿಸರು ಅಪಘಾತ ಆದ ದಿನಾಂಕಃ 07.06.2023 ಎಂದು ಹೇಳಿರುತ್ತಾರೆ. ಅಪಘಾತ ಆದ ವ್ಯಕ್ತಿ ನಮ್ಮ ಪಕ್ಕದ ಮನೆಯವರು. ಅಪಘಾತ ಹೇಗೆ ಆಯಿತು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ–7 ಅನ್ನು ಪೊಲೀಸ ಠಾಣೆಯಲ್ಲಿ ಮಾಡಿರುತ್ತಾರೆ. ಯಾವ ಪೊಲೀಸರ್ ಠಾಣೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ–2 ಅನ್ನು ಪೊಲೀಸರು ಬರವಣಿಗೆ ಮಾಡಿರುತ್ತಾರೆ, ನಿಪಿ–2 ಅನ್ನು ನಾನು ಒದಿ ನೋಡಿರುವುದಿಲ್ಲ. ನಿಪಿ–2 ರಲ್ಲಿ ಎನೂ ಬರೆದಿದ್ದಾರೆ ಎಂದು ನಾನು ನೋಡಿರುವುದಿಲ್ಲ. ಪೋಲಿಸರ ಕೋರಿಕೆ ಮೇರೆಗೆ ನಾನು ನಿಪಿ–2 ಕ್ಕೆ ಸಹಿ ಹಾಕಿರುತ್ತೇನೆ. ಯಾರಿಂದ ಅಪಘಾತ ಆಯಿತು ಎಂದು ನನಗೆ ಗೂತ್ತಿರುವುದಿಲ್ಲ ಎಂದರೆ ಸರಿ. ಅಪಘಾತ ಪಡಿಸಿದ ವ್ಯಕ್ತಿ ಯಾರು ಎಂದು ನನಗೆ ಗೂತ್ತಿರುವುದಿಲ್ಲ ಎಂದರೆ ಸರಿ.

ನಿಪಿ–7 ಕ್ಕೆ ಬರಲು ನನಗೆ ಪೊಲೀಸರು ನೋಟಿಸನ್ನು ನೀಡಿರಲಿಲ್ಲ ಎಂದರೆ ಸರಿ.

ಚಾಸಾ–1 ರವರ ಕೋರಿಕೆ ಮೇರೆಗೆ ಬಂದಿರುತ್ತೇನೆ ಎಂದರೆ ಸರಿ. ಇದೇ ಬೈಕು ಎಂದು ಪೊಲೀಸರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಇದೇ ಬೈಕ ಎಂದು ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ಪೊಲೀಸರು ನನ್ನಿಂದ ಆ ಸಮಯದಲ್ಲಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಪಂಚನಾಮೆಯನ್ನು ಪೊಲಿಸರು ಬರೆದುಕೊಂಡರು ಹಾಗೂ ಅದಕ್ಕೆ ಕೇವಲ ಸಹಿಯನ್ನು ಹಾಕಿರುತೆನೆ ಎಂದರೆ ಸರಿ. ನಿಪಿ–7 ಅನ್ನು ನಾನು ಒದಿಯೇ ಸಹಿ ಹಾಕಿರುತ್ತೇನೆ. ಈಗ ಅದರಲ್ಲಿ ಎನು ಬರೆದಿದೆ ಎಂದು ನನಗೆ ನೆನಪಿರುವುದಿಲ್ಲ. ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡದೇ ಇದ್ದರು, ಪೊಲೀಸರ ಕೋರಿಯ ಮೇರೆಗೆ ಕೇವಲ ಸಹಿಗಳನ್ನು ಪೊಲಿಸ್ ಠಾಣೆಯಲ್ಲಿ ಹಾಕಿ ಚಾಸಾ–1 ರವರಿಗೆ ಅನುಕೂಲ ಆಗಲು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.